ಶ್ರೀ ಹೆಚ್. ಸಿದ್ದವೀರಪ್ಪ :— ಸಹಾನುಭೂತಿಯಿಂದ ಈ ವಿಷಯವನ್ನು ಪರಿಶೀಲಿಸುತ್ತೇವೆ ನಾವು ತಾಲ್ಲೂಕು ಬೋರ್ಡಿನಿಂದ ಹಣ ಒದಗಿಸುವುದಕ್ಕೆ ಕಾಯುವುದಿಲ್ಲ ಎಲ್ಲೆಲ್ಲಿ ಕುಡಿಯುವ ನೀರಿಗೆ ಅಭಾವವಿದೆ ಅಲ್ಲಿ ಅದಕ್ಕೆ ಅವಕಾಶ ಮಾಡಿ ನಂತರ ತಾಲ್ಲೂಕು ಬೋರ್ಡಿನಿಂದ ಹಣವಿದ್ದಾಗ ಪಡೆದುಕೊಳ್ಳುತ್ತೇವೆ. ಅದಕ್ಕಾಗಿ ಈ ಕೆಲಸ ನಿಲ್ಲಿಸುವುದಿಲ್ಲ. ಬೋರ್ ವೆಲ್, ಓಪನ್ ವೆಲ್ ಮುಂತಾದುವನ್ನು ತೆಗೆಸಿ ಹ್ಯಾಂಡ್ ಪಂಪು ಹಾಕಿಸಿ ಆದಷ್ಟು ಜಾಗ್ರತೆ ಬೇಕಾದ ನೀರನ್ನೊದಗಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಎಂ ಮಂಜುನಾಥ್ : ಹಿಂದೆ ತೊಂದರೆಯಾದಾಗ ಕೆರೆಗಳಲ್ಲಿ ಬಾವಿ ತೆಗೆಸಿ ಕ್ಷಾಮ ಪರಿಹಾರ ನಿಧಿಯಿಂದ ಹಣ ಖರ್ಚು ಮಾಡಿ ಅನುಕೂಲ ಮಾಡಿದ್ದಾರೆ. ಹಾಗೆ ಈಗಲೂ ಮಾಡುವಿರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ :— ಈ ಕೆಲಸವನ್ನು 64 ಫ್ಯಾಮಿನ್ ರಿಲೀಫ್ ಬಾಬಿನ ಕೆಳಗೆ ಮಾಡುವುದಕ್ಕಾಗುವುದಿಲ್ಲ. ನೀರಿಗೆ ಬೇರೆ ಏರ್ಪಾಡು ಮಾಡುವುದಾಗಿ ಹೇಳಿದ್ದಾರೆ.

ಶ್ರೀ. ಟಿ. ಎಂ ಮಂಜುನಾಥ್ : ಹೇಗಾದರೂ ಸರಿ, ನೀರನ್ನೊದಗಿಸಿದರೆ ಸಾಕು. ಶ್ರೀ ಸಿದ್ದವೀರಪ್ಪನವರಿಗೆ ಪಿ. ಎಚ್. ಇ. ಗೆ ಅಧಿಕಾರವಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ.—64 ಫ್ಯಾಮಿನ್ ಬಾಬಿನ ತಂಟೆ ನಿಮಗೆ ಬೇಡ. ಡೆವಲಪ್‌ಮೆಂಟ್ ಪ್ರೋಗ್ರಾಂನಲ್ಲಿ ಈ ಕೆಲಸ ತೆಗೆದುಕೊಳ್ಳುತ್ತೇವೆ, ಜನ ಮತ್ತು ದನ ಸಾಯುವುದಕ್ಕೆ ಬಿಡುವುದಿಲ್ಲ, ಯೋಚನೆ ಮಾಡಬೇಡಿ.

FACILITIES TO INSTAL PUMP SETS TO THE WELLS

ಶ್ರೀ ಸಿ. ಬೈರೇಗೌಡ (ವೇಮಗಲ್).—ಇವತ್ತು ರಾಜ್ಯದಲ್ಲಿ ಬೇಸಿಗೆ ಬರುತ್ತಿದೆ, ಅನೇಕ ಬಾವಿಗಳಲ್ಲಿ ನೀರಿಲ್ಲ, ಅನೇಕರು ಬಾವಿಗಳಿಗೆ ಪಂಪುಸೆಟ್ಟುಗಳನ್ನು ಹಾಕಿಕೊಳ್ಳಬೇಕೆಂದರೆ ಅದಕ್ಕೆ ಅವಕಾಶ ಸಿಕ್ಕಿಲ್ಲ, 780 ಬಾವಿಗಳಿಗೆ ಪಂಪುಸೆಟ್ಟಿಲ್ಲ. ಅಧಿಕಾರಿಗಳಲ್ಲಿ ವಿಚಾರ ಮಾಡಿದರೆ ವೈರ್ ಇಲ್ಲ ಎಂದು ಹೇಳುವರು. ಸುಮ್ಮಾರು 20 ಜನ ರೈತರು ನನ್ನ ಬಳಿಗೆ ಎಂದಿದ್ದರು. ಬೇಗ ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ಪರಿಹಾರ ನೀಡಬೇಕು.

ಅಧ್ಯಕ್ಷರು.—ವಿಧಿನಿಯಮಗಳಿಗನುಸಾರವಾಗಿ ನೋಟೀಸು ಬರೆದು ಕಳುಹಿಸಿ. ಹೀಗೆ ಸುಮ್ಮನೆ ಹೇಳುವುದಕ್ಕಾಗುವುದಿಲ್ಲ.